ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಅನುಭವಿಸುತ್ತಿರುವ ನಷ್ಟ

2363(2865) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 2000-01ನೇ ಸಾಲಿನಲ್ಲಿ ನಷ್ಟವನ್ನು ಅನುಭವಿಸಿದೆಯೆ;

ಆ) ಹಾಗಿದ್ದಲ್ಲಿ, ಕಳೆದ ಸಾಲಿನಲ್ಲಿ ಈ ನಿಗಮವು ಅನುಭವಿಸಿರುವ ನಷ್ಟವೆಷ್ಟು;

ಇ) ಇದಕ್ಕೆ ಕಾರಣಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 2000-01 ನೇ ಸಾಲಿನ ಲೆಕ್ಕ ಪತ್ರಗಳನ್ನು ಅಖೈರುಗೊಳಿಸಲಾಗುತ್ತಿದೆ. ಈ ಕೆಲಸ ಮುಗಿದನಂತರ ಲಾಭ : ನಷ್ಟದ ಪರಿಸ್ಥಿತಿ ತಿಳಿಯುವುದು.

ಆ) ಕಳೆದ ಸಾಲಿನಲ್ಲಿ ನಿಗಮವು 1.70 ಲಕ್ಷ ರೂಪಾಯಿಗಳಷ್ಟು ಲಾಭವನ್ನು ಗಳಿಸಿರುತ್ತದೆ.

ಇ) ಅನ್ವಯಿಸುವುದು.

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಅಗಮೆಂಟೇಷನ್ ಆಫ್ ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು ಮಂಜೂರು ಮಾಡುವುದು.

2367(2211) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಜಮೀನುಗಳನ್ನು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಸಂಗತಿ ನಿಜವೇ?

ಆ) ಈ ಗ್ರಾಮದ ಜಮೀನುಗಳು ಟೈಲೆಂಡ್‌ದಲ್ಲಿ ಇದ್ದು ಸರಿಯಾಗಿ ನೀರು ಬರದೆ ಇದ್ದ ಕಾರಣ ಈ ಜಮೀನುಗಳಿಗೆ ಸರಿಯಾಗಿ ನೀರು ಕೊಡುವಂತೆ ಮಾಡಲು ಮುಖ್ಯ ಅಭಿಯಂತರರು ನೀರಾವರಿ ಇಲಾಖೆ ಉತ್ತರವಲಯ ಬೆಳಗಾಂವ ಇವರು ಆಗಮಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಸ್ಕೀಂ ಅನ್ನು ಎಂದು ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಿದರು.